**ದಿನಾಂಕಃ 31.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ನಂ.9 ರ ಪರ ವಕೀಲರಿಂದಃ**

14. ನಿಡಿ-3 ರಲ್ಲಿ ಕೆಂಪೇಗೌಡ, ಮಹದೇವ, ನಾಗರಾಜು, ದ್ಯಾವೇಗೌಡ ಹಾಗೂ ಶಿವಸ್ವಾಮಿ ರವರು ಸ್ವಂತ ಎಂಬುದಾಗಿ ವ್ಯವಸಾಯ ಮಾಡುತ್ತಿರುವುದಾಗಿ ತೋರಿಸಿರುತ್ತಾರೆಂದರೆ ಸರಿ. ಅದೇ ರೀತಿ ಸದರಿ ದಾಖಲೆಯಲ್ಲಿ ಕೆಂಪೇಗೌಡ ಬಿನ್ ದ್ಯಾವೇಗೌಡ ಹಾಗೂ ಮಹದೇವ ಬಿನ್ ದ್ಯಾವೇಗೌಡ ಇವರಿಗೆ ಪ್ರತ್ಯೇಕ ವಿಸ್ತೀರ್ಣವಿದ್ದು ಪ್ರತ್ಯೇಕ ಖಾತೆ ಇರುತ್ತದೆಂದರೆ ಸರಿ. ಅದೇ ರೀತಿ ಸದರಿ ದಾಖಲೆಯಲ್ಲಿ ನಾಗರಾಜು ಬಿನ್ ದ್ಯಾವೇಗೌಡ, ದ್ಯಾವೇಗೌಡ ಉಃಶಂಕರೇಗೌಡ ಬಿನ್ ದ್ಯಾವೇಗೌಡ ಇವರಿಗೂ ಪ್ರತ್ಯೇಕ ವಿಸ್ತೀರ್ಣವಿದ್ದು ಪ್ರತ್ಯೇಕ ಖಾತೆ ಇರುತ್ತದೆಂದರೆ ಸರಿ. ಸದರಿ ಖಾತೆಗಳು ವಿಭಾಗದ ಮೂಲಕ ಎಂಬುದಾಗಿ ಇರುತ್ತದೆಂದರೆ ಸರಿ. ಸದರಿ ದಾಖಲೆಯ ಪ್ರಕಾರ ಇವರುಗಳು ಪ್ರತ್ಯೇಕವಾಗಿ ವಿಸ್ತೀರ್ಣ ಹಾಗೂ ಖಾತೆ ಹೊಂದಿದ್ದರೂ ಸಹಿತ ನಾನು ಈ ವಿಚಾರವಾಗಿ ಈ ಜಾಗದ ಸಂಬಂಧ ಸಾಲ ಪಡೆದಿರುತ್ತೇನೆಂದರೆ ಸರಿ.

15. ಸಾಕ್ಷಿಗೆ ಈಗ 9ನೇ ಪ್ರತಿವಾದಿಯ ಪರ ವಕೀಲರು ತಾನು ತೆಗೆದುಕೊಂಡಿರುವ ಸಾಲದ ಋಣಭಾರ ಪತ್ರದ ಪ್ರತಿಯನ್ನು ಮುಖಬೆಲೆ ಮಾಡಲಾಗಿ ಸಾಕ್ಷಿಯು ಅದನ್ನು ಒಪ್ಪಿ ಕೊಂಡಿದ್ದು ಸದರಿ ದಾಖಲೆಯನ್ನು ನಿಡಿ-4 ಎಂದು ಈಗ ಗುರುತಿಸಲಾಯಿತು. ಸದರಿ ಸಾಲವನ್ನು ನಾನು ಪ್ರಸ್ತುತ ದಾವೆಯನ್ನು ಹಾಕಿದ ಮೇಲೆ ತೆಗೆದುಕೊಂಡಿರುತ್ತೇನೆಂದರೆ ಸರಿ. ಸದರಿ ಸಾಲ ಪಡೆಯುವ ಸಂದರ್ಭದಲ್ಲಿ ನಮ್ಮ ಯಾವುದೇ ಒಟ್ಟು ಕುಟುಂಬದ ಸದಸ್ಯರು ಸಹಿ ಮಾಡಿರುವುದಿಲ್ಲ ನಾನು ಒಬ್ಬನೇ ಸಹಿ ಮಾಡಿ ಪಡೆದಿರುತ್ತೇನೆಂದರೆ ಸರಿ. ಈ ರೀತಿ ಪ್ರತ್ಯೇಕವಾಗಿ ತಮ್ಮ ವಿಸ್ತೀರ್ಣದಲ್ಲಿ ಇರುವವರು ಸದರಿ ತಮ್ಮಜಾಗವನ್ನು 9ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಸರ್ವೆ ನಂ.34/1 ಹಾಗೂ 2 ಒಟ್ಟು ಕುಟುಂಬದ ಆಸ್ತಿ ಎಂದು ಹೇಳಿದ್ದು ಆದರೆ ಈ ರೀತಿ ಪ್ರತ್ಯೇಕ ಖಾತೆಗಳು ಹೊಂದಿರುವ ಬಗ್ಗೆ ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ.

16. ಕೇವಲ ಸದರಿ ಕ್ರಯದ ಕರಾರು ಪತ್ರವು 9ನೇ ಪ್ರತಿವಾದಿಯ ಹೆಸರಿಗೆ ಆದ ಮೇಲೆ ಹಣದ ಆಸೆಗೆ ಈ ರೀತಿ ಸುಳ್ಳು ದಾವೆಯನ್ನು ಹಾಕಿರುತ್ತೇನೆಂದರೆ ಸರಿಯಲ್ಲ. ಸದರಿ ರವರು ಕ್ರಯದ ಕರಾರು ಪತ್ರವನ್ನು ಮಾಡಿದ ಮೇಲೆ ಪ್ರತ್ಯೇಕವಾಗಿ ಪಹಣಿಗಳು ಅವರ ಹೆಸರಿನಲ್ಲಿ ಬರುತ್ತಿವೆ ಎಂದರೆ ಸರಿ. ಸಾಕ್ಷಿಗೆ 9ನೇ ಪ್ರತಿವಾದಿಯ ಪರ ವಕೀಲರು ಸರ್ವೆ ನಂ.34 ರ 2025-26 ನೇ ಇಸವಿಯ ಪಹಣಿ ಪ್ರತಿಯನ್ನು ಮುಖಬೆಲೆ ಮಾಡಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗ ನಿಡಿ-5 ಎಂದು ಗುರುತಿಸಲಾಯಿತು. ಈ ರೀತಿ ಪ್ರತ್ಯೇಕ ಖಾತೆಗಳನ್ನು ಹೊಂದಿದ್ದು ಅವರವರ ಕುಟುಂಬದ ನಿರ್ವಹಣೆ ಸಂಬಂಧ ಸದರಿ ಸ್ವತ್ತುಗಳನ್ನು 9ನೇ ಪ್ರತಿವಾದಿಗೆ ಕರಾರು ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿಯು ಇದು ನನ್ನ ತಂದೆಗೆ ಸೇರಿದ ಆಸ್ತಿ ಮೋಸ ಮಾಡಿ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ಸಂಬಂಧ ನಾನು ತಹಶೀಲ್ದಾರ್ ರವರಿಗೆ ಅರ್ಜಿ ಕೊಟ್ಟಿರುತ್ತೇನೆ. ನಾನು ಈ ರೀತಿ ಯಾವುದೇ ಅರ್ಜಿ ಕೊಟ್ಟಿರುವುದಿಲ್ಲ ಹಾಗೂ ನ್ಯಾಯಾಲಯಕ್ಕೆ ಸದರಿ ದಾಖಲೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

17. ನಿಡಿ-1 ರ ಪ್ರಕಾರ ಸದರಿ ಜಾಗವನ್ನು ನನ್ನ ಮಾವನವರು ಖರೀದಿಸಿ ಕೊಟ್ಟಿರುತ್ತಾರೆಂದು ಹೇಳಿದ್ದು ಆದರೆ ಸದರಿ ದಾಖಲೆಯಲ್ಲಿ ನಾನೇ ಹಣ ಕೊಟ್ಟಿರುವುದಾಗಿ ನಮೂದಿಸಿರುತ್ತದೆಂದರೆ ಸುಳ್ಳು. ನಿಡಿ-1 ರಲ್ಲಿ ಸದರಿ ಷೆಡ್ಯೂಲ್ ಸ್ವತ್ತನ್ನು ನನ್ನ ಅವಶ್ಯಕತೆ ಸಂಬಂಧ ಮಾರಿದ್ದು ಅದರಲ್ಲಿ 2 ಸಾವಿರ ಹಣವನ್ನು ಪಡೆದಿರುವುದಾಗಿ ನಮೂದಿಸಲಾಗಿದೆ ಎಂದರೆ ಸರಿ. ಸದರಿ 9ನೇ ಪ್ರತಿವಾದಿಗೆ ದ್ಯಾವೇಗೌಡ ಹಾಗೂ ಅವರ ಕುಟುಂಬ, ಮಹದೇವ ಮತ್ತು ಅವರ ಕುಟುಂಬ ಹಾಗೂ ಕೆಂಪೇಗೌಡ ಹಾಗೂ ಅವರ ಕುಟುಂಬದವರು ಪ್ರತ್ಯೇಕವಾಗಿ ಮೂರು ಕ್ರಯದ ಕರಾರು ಪತ್ರಗಳನ್ನು ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿಯು ಅದು ನಮಗೆ ಗೊತ್ತಿಲ್ಲ ಮೋಸ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದ್ಯಾವೇಗೌಡ ಸಂಬಂಧ ಇರುವ ಕರಾರು ಪತ್ರವನ್ನು ನಾನು ನಿಪಿ-6 ರಂತೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಮೂರು ಕ್ರಯದ ಕರಾರು ಪತ್ರಗಳು ದಿನಾಂಕ 18.08.2010 ರಲ್ಲೇ ಆಗಿರುತ್ತವೆ ಎಂದರೆ ನನಗೆ ಯಾವಾಗ ಆಗಿರುತ್ತದೆಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

18. ಸಾಕ್ಷಿಗೆ 9ನೇ ಪ್ರತಿವಾದಿಯ ಪರ ವಕೀಲರು ದಿನಾಂಕ 18.08.2010 ರ ಕ್ರಯದ ಕರಾರು ಪತ್ರವನ್ನು ತೋರಿಸಿ ಶ್ರೀಮತಿ ಕೆಂಪಮ್ಮ ಹಾಗೂ ಅವರ ಕುಟುಂಬ ಅದನ್ನು ಮಾಡಿಕೊಟ್ಟಿರುತ್ತಾರೆಂದು ಸೂಚಿಸಿದಾಗ ಸಾಕ್ಷಿಯು ಹೌದು ಎಂದು ಒಪ್ಪಿ ಕೊಂಡಿದ್ದು ಅದನ್ನು ಈಗ ನಿಡಿ-6 ಎಂದು ಗುರುತಿಸಲಾಯಿತು.

19. ಸಾಕ್ಷಿಗೆ 9ನೇ ಪ್ರತಿವಾದಿಯ ಪರ ವಕೀಲರು ದಿನಾಂಕ 18.08.2010 ರ ಕ್ರಯದ ಕರಾರು ಪತ್ರವನ್ನು ತೋರಿಸಿ ಶ್ರೀಮಹದೇವ ಹಾಗೂ ಅವರ ಕುಟುಂಬ ಅದನ್ನು ಮಾಡಿಕೊಟ್ಟಿರುತ್ತಾರೆಂದು ಸೂಚಿಸಿದಾಗ ಸಾಕ್ಷಿಯು ಹೌದು ಎಂದು ಒಪ್ಪಿ ಕೊಂಡಿದ್ದು ಅದನ್ನು ಈಗ ನಿಡಿ-7 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಇದು ಆಗಿರುವುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಯಾವುದೇ ಕ್ರಯದ ಕರಾರು ಪತ್ರಗಳಲ್ಲಿ ಜಂಟಿ ಸ್ವಾಧೀನ ಇರುವ ಬಗ್ಗೆ ತೋರಿಸಿಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಅವರ ಸ್ವಂತ ಆಸ್ತಿಯನ್ನು ಅವರು ಕ್ರಯ ಮಾಡಿಕೊಟ್ಟರೆ ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಆಸ್ತಿ ಮೋಸದಿಂದ ಮಾಡಿಕೊಟ್ಟಿದ್ದಾರೆಂದು ನುಡಿಯುತ್ತಾರೆ. ಸದರಿ ಕ್ರಯದ ಕರಾರು ಪತ್ರ ಆದ ಮೇಲೆ ಅವರುಗಳು ನನ್ನ ಬಳಿ ಬಂದು ಈ ರೀತಿ ಕ್ರಯ ಮಾಡಿಕೊಡುವುದಾಗಿ ತಿಳಿಸಿದ ನಂತರ ನಾನು ದಾವೆ ಹಾಕಿರುತ್ತೇನೆಂದರೆ ಸರಿಯಲ್ಲ.

20. ಸದರಿ ದಾವೆಯಲ್ಲಿ ನನಗೆ ಸಂಬಂಧಿಸಿದ ಯಾವುದೇ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಅದು ನಾನು ಕೊಂಡುಕೊಂಡ ಆಸ್ತಿಗಳು ಎಂದು ನುಡಿಯುತ್ತಾರೆ. ಕೇವಲ 9ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಹಾಗೂ ಅವರ ಹೆಸರಿನಲ್ಲಿ ಕ್ರಯ ನೊಂದಣಿ ಆಗಬಾರದು ಎಂಬ ಉದ್ದೇಶದಿಂದ ಈ ರೀತಿ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**